ಸಮಗ್ರ ಶಿಕ್ಷಣ–ಕರ್ನಾಟಕ
ಹೊಸ ಸಾರ್ವಜನಿಕ ಕಛೇರಿಗಳ ಪುರಕ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು – 560 001

ಸಂಖ್ಯೆ: ಎಸ್.ಎಸ್.ಕೆ/ಕ್ಯೂ.ಎಂ.ಟಿ/ಕ್ರೀಡೆ/2021-22 ದಿನಾಂಕ: 06.11.2021

# ಸುತ್ತೋಲೆ

ವಿಷಯ: 2021-22 ನೇ ಸಾಲಿನ ಫಿಟ್ ಇಂಡಿಯಾ ಶಾಲಾ ಸಪ್ತಾಹವನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: ಎಂ.ಒ.ಇ ಯ ಪತ್ರ ಸಂಖ್ಯೆ: 12-1/2020-IS.4 ದಿನಾಂಕ: 03.11.2021.

********

ಫಿಟ್ ಇಂಡಿಯಾ ಕಾರ್ಯಕ್ರಮವು ರಾಷ್ಟ್ರವ್ಯಾಪಿ ಆಂದೋಲನವಾಗಿದ್ದು, ವಿದ್ಯಾರ್ಥಿಗಳು ದೈಹಿಕ ಚಟುವಟಿಕೆಗಳಲ್ಲಿ ಮತ್ತು ಕ್ರೀಡೆಗಳಲ್ಲಿ ಭಾಗವಹಿಸುವುದರ ಮೂಲಕ ಆರೋಗ್ಯಕರ ಮತ್ತು ಸದೃಢವಾಗಿರುವಂತೆ ಪ್ರೋತ್ಸಾಹಿಸುವ ಉದ್ದೇಶ ಹೊಂದಿದೆ. ಸದರಿ ಕಾರ್ಯಕ್ರಮದಲ್ಲಿ ರಾಜ್ಯದ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳನ್ನು ಕ್ರೀಡೆ ಮತ್ತು ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಿ, ಅವರನ್ನು ದೈಹಿಕ ಮತ್ತು ಮಾನಸಿಕವಾಗಿ ಸದೃಢಗೊಳಿಸುವುದಾಗಿದೆ.

ಈ ಕಾರ್ಯಕ್ರಮವು ಕೇಂದ್ರ ಸರ್ಕಾರದ ಯುವಜನ ಮತ್ತು ಕ್ರೀಡಾ ಮಂತ್ರಾಲಯದಡಿಯಲ್ಲಿ "ಆಜಾದಿ ಕಾ ಅಮೃತ್ ಮಹೋತ್ಸವ್" ಚಟುವಟಿಕೆಯಾಗಿದ್ದು, ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ 14.11.2021 ರಿಂದ 12.12.2021ರ ರೊಳಗೆ ಹಮ್ಮಿಕೊಳ್ಳಬೇಕಾಗಿದೆ.

**ಈ ಕುರಿತಂತೆ ಕೆಳಗಿನ ಮಾರ್ಗಸೂಚಿಗಳ ಪ್ರಕಾರ ಕ್ರಮ ಕೈಗೊಳ್ಳುವುದು.**

- ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳು https://fitindia.gov.in/fit-india-school-week ಯಲ್ಲಿ ಮೊದಲು ನೋಂದಾಯಿಸಿ ನಂತರ 14.11.2021 ರಿಂದ 12.12.2021ರ ರೊಳಗೆ ಫಿಟ್ ಇಂಡಿಯಾ ಶಾಲಾ ಸಪ್ತಾಹವನ್ನು 06 ದಿನಗಳು ಕಡ್ಡಾಯವಾಗಿ ಹಮ್ಮಿಕೊಳ್ಳುವುದು. ಈ ಜ್ಞಾಪನದೊಂದಿಗೆ ನೋಂದಣಿಯ ಪ್ರಕ್ರಿಯೆ ಬಗ್ಗೆ ಎಂ.ಒ.ಇ ನ ಜ್ಞಾಪನ ಲಗತ್ತಿಸಿದೆ.
- ನೋಂದಾಯಿಸಿದ ಶಾಲೆಗಳು ಕಾರ್ಯಕ್ರಮವನ್ನು ಆಯೋಜಿಸಿ ಅದರ ಫೋಟೊ ಮತ್ತು ವಿಡಿಯೋಗಳನ್ನು ಮೇಲೆ ನೀಡಿರುವ ವೆಬ್ ಸೈಟ್‌ನಲ್ಲಿ ಮಾಡಬೇಕಾಗಿದೆ. ಅಪ್‌ಲೋಡ್ ಮಾಡಿದ ನಂತರ ಡಿಜಿಟಲ್ ಪ್ರಶಸ್ತಿ ಪತ್ರವನ್ನು ಡೌನ್ಲೋಡ್ ಮಾಡಿಕೊಂಡು, ವಿವರವನ್ನು ರಾಜ್ಯ ಕಚೇರಿಗೆ ನೀಡುವುದು.
- ಕಾರ್ಯಕ್ರಮದ ಸಮರ್ಪಕ ಅನುಷ್ಠಾನಕ್ಕಾಗಿ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳನ್ನು ಜಿಲ್ಲಾ ನೋಡಲ್ ಅಧಿಕಾರಿಯಾಗಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು, ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳನ್ನು ತಾಲ್ಲೂಕು ನೋಡಲ್ ಅಧಿಕಾರಿಯಾಗಿ ನೇಮಿಸುವುದು.
- ಉಪನಿರ್ದೇಶಕರು (ಆಡಳಿತ) ರವರು ಕಾರ್ಯಕ್ರಮದ ವಿವರ ಮತ್ತು ಅನುಷ್ಠಾನ ಕುರಿತಂತೆ ತಮ್ಮ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳ ಸಭೆ ಆಯೋಜಿಸಿ, ಮಾಹಿತಿ ನೀಡುವುದು.
- ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ಮುಖ್ಯ ಶಿಕ್ಷಕರ ಸಭೆ ಕರೆದು ಕಾರ್ಯಕ್ರಮ ಅನುಷ್ಠಾನ ಕುರಿತು ಕ್ರಮ ಕೈಗೊಳ್ಳುವುದು.
- ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ಮುಖ್ಯ ಶಿಕ್ಷಕರು ಅನುಬಂಧ-1 ರಲ್ಲಿರುವಂತೆ ಪ್ರತಿ ದಿನದ ಚಟುವಟಿಕೆಗಳನ್ನು ಕಡ್ಡಾಯವಾಗಿ ಆಯೋಜಿಸುವುದು. ಈ ಕುರಿತು ಸಾಕಷ್ಟು ಮುಂಚಿತವಾಗಿಯೇ ಶಾಲಾ ಹಂತದ ಯೋಜನೆ ಸಿದ್ಧಪಡಿಸಿಕೊಳ್ಳುವುದು.

- ಫಿಟ್ ಇಂಡಿಯಾ ಶಾಲಾ ಸಪ್ತಾಹ ಕಾರ್ಯಕ್ರಮದಲ್ಲಿ ಕೈಗೊಳ್ಳಲಾಗುವ ವಿವಿಧ ಚಟುವಟಿಕೆಗಳ ಕುರಿತು ವಿದ್ಯಾರ್ಥಿಗಳಿಗೆ ಮುಂಚಿತವಾಗಿಯೇ ಮಾಹಿತಿ ನೀಡುವುದು.

**ಕೋವಿಡ್–19 ರ ಕುರಿತಂತೆ ಅನುಸರಿಸಬೇಕಾದ ಮುನ್ನೆಚರಿಕಾ ಕ್ರಮಗಳು:**

ಕೋವಿಡ್–19 ಸಾಂಕ್ರಾಮಿಕ ರೋಗ ಹರಡುತ್ತಿರುವುದರಿಂದ ಮಕ್ಕಳ ಆರೋಗ್ಯದ ದೃಷ್ಟಿಯ ಹಿನ್ನೆಲೆಯಲ್ಲಿ ಫಿಟ್ ಇಂಡಿಯಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಾಗ ಕಡ್ಡಾಯವಾಗಿ ಕೆಳಕಂಡ ಕ್ರಮಗಳನ್ನು ಅನುಸರಿಸುವುದು.

- ಪ್ರತಿ ದಿನದ ಚಟುವಟಿಕೆಗಳನ್ನು ಆಯೋಜಿಸುವಾಗ ವಿದ್ಯಾರ್ಥಿಗಳ ನಡುವೆ ಸೂಕ್ತ ಸಾಮಾಜಿಕ ಅಂತರವಿರಬೇಕು.
- ಚಟುವಟಿಕೆಗಳಲ್ಲಿ ಭಾಗವಹಿಸುವ ಎಲ್ಲಾ ಶಿಕ್ಷಕರು ಮತ್ತು ಸಂಪನ್ಮೂಲ ವ್ಯಕ್ತಿಗಳು ಕೂಡ ಸಾಮಾಜಿಕ ಅಂತರ ಕಾಪಾಡಿಕೊಳ್ಳಬೇಕು.
- ಎಲ್ಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಕಡ್ಡಾಯವಾಗಿ ಮಾಸ್ಕ್ ಧರಿಸಿರುವುದು.
- ಕೆಮ್ಮು, ನೆಗಡಿ, ಜ್ವರದಂತಹ ಲಕ್ಷಣಗಳಿರುವ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಚಟುವಟಿಕೆಗಳಲ್ಲಿ ಭಾಗವಹಿಸದಂತೆ ನೋಡಿಕೊಳ್ಳುವುದು.

ಫಿಟ್ ಇಂಡಿಯಾ ಕಾರ್ಯಕ್ರಮದ ಅನುಷ್ಠಾನಕ್ಕಾಗಿ "ಫಿಟ್ ಇಂಡಿಯಾ ಆಂದೋಲನ–ಫಿಟ್ ಇಂಡಿಯಾ ಶಾಲಾ ಸಪ್ತಾಹ" ಕುರಿತ ವಿವರವಾದ ಮಾರ್ಗಸೂಚಿಯನ್ನು www.fitindia.gov.in ನಿಂದ ಪಡೆಯಬಹುದು. ಈ ಮಾರ್ಗಸೂಚಿಯಲ್ಲಿನ ಸೂಚನೆಗಳಂತೆ ಕಾರ್ಯಕ್ರಮವನ್ನು ನಿಯಮಾನುಸಾರ ಹಮ್ಮಿಕೊಳ್ಳುವುದು. ತಮ್ಮ ಜಿಲ್ಲೆಯ ಫಿಟ್ ಇಂಡಿಯಾ ಕಾರ್ಯಕ್ರಮ ಅನುಷ್ಠಾನಗೊಳಿಸಿರುವ ಕುರಿತು ಸೂಕ್ತ ಭಾವಾಚಿತ್ರಗಳೊಂದಿಗೆ ವಿವರವಾದ ವರದಿಯನ್ನು ಹಾಗೂ ತಮ್ಮ ವ್ಯಾಪ್ತಿಯ ಎಲ್ಲಾ ತಾಲ್ಲೂಕುಗಳಿಂದ ಕಾರ್ಯಕ್ರಮದ ಮಾಹಿತಿಯನ್ನು ಪಡೆದು, ಕ್ರೋಢಿಕರಿಸಿ, ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧ–2 ರಲ್ಲಿ ಭರ್ತಿ ಮಾಡಿ, ಸಂಬಂಧಿಸಿದ ಜಿಲ್ಲೆಯ ಉಪನಿರ್ದೇಶಕರ ದೃಢೀಕರಣದೊಂದಿಗೆ ದಿನಾಂಕ: 30.12.2021 ರೊಳಗಾಗಿ ಇ–ಮೇಲ್ ವಿಳಾಸ ssaqmt2016@gmail.com ಗೆ ಸಾಫ್ಟ್ ಪ್ರತಿಯನ್ನು ಸಲ್ಲಿಸುವುದು.

6/11/21

ನಿರ್ದೇಶಕರು (ಕಾರ್ಯಕ್ರಮ)
ಸಮಗ್ರ ಶಿಕ್ಷಣ–ಕರ್ನಾಟಕ

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:**

- ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), (ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ.
- ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರುಗಳ ಮುಖಾಂತರ)
- ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರಿಗೆ (ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ)

# ಅನುಬಂಧ-1
## ಶಾಲಾ ಸಪ್ತಾಹ ಚಟುವಟಿಕೆಗಳ ವಿವರ

| ಕ್ರಸಂ | ದಿನ | ಚಟುವಟಿಕೆಯ ವಿವರ | ವಿಧಾನ | ನಿರ್ವಹಣಾ ಜವಾಬ್ದಾರಿ | ಮೌಲ್ಯಮಾಪನ ವಿಧಾನ | ಮೌಲ್ಯಮಾಪಕರು |
|---|---|---|---|---|---|---|
| 1 | 1 | ಆರಂಭಿಕ ದಿನ – ಆಜಾದಿ ಕಾ ಅಮೃತ್ ಮಹೋತ್ಸವ್‌ವನ್ನು ಆಚರಿಸುವ ಸಲುವಾಗಿ ಭಾರತೀಯ/ಪ್ರಾದೇಶಿಕ ನೃತ್ಯದ ಮೂಲಕ ಸಂಯೋಜಿತ ಫಿಟ್ನೆಸ್ ಮಾಡಿಸುವುದು. | ಸಾಮೂಹಿಕ ಭಾರತೀಯ/ದೇಶಿಯ ನೃತ್ಯ ವಿಧಾನ | ದೈಹಿಕ ಶಿಕ್ಷಕರು | ವೀಕ್ಷಣೆ | ಮುಖ್ಯ ಶಿಕ್ಷಕರು / ಶಿಕ್ಷಕರು |
| 2 | 2 | ವಿದ್ಯಾರ್ಥಿಗಳ ಮಾನಸಿಕ ಬೆಳವಣಿಗೆಗಾಗಿ ಕ್ರೀಡೆ ಕುರಿತು ಚರ್ಚೆಗಳ ವಿಚಾರಗೋಷ್ಠಿ ಉಪನ್ಯಾಸಗಳನ್ನು ಏರ್ಪಡಿಸುವುದು | ಉಪನ್ಯಾಸ ಮತ್ತು ಚಟುವಟಿಕೆ ವಿಧಾನ | ದೈಹಿಕ ಶಿಕ್ಷಕರು ಮತ್ತು ವಿಜ್ಞಾನ ಶಿಕ್ಷಕರು | ಚರ್ಚಾ ಸ್ಪರ್ಧೆ | ಮುಖ್ಯ ಶಿಕ್ಷಕರು/ಹಿರಿಯ ಶಿಕ್ಷಕರು |
| | | ವಿದ್ಯಾರ್ಥಿಗಳ ಮಾನಸಿಕ ಬೆಳವಣಿಗೆಗಾಗಿ ಫಿಟ್ನೆಸ್ ಮತ್ತು ಕ್ರೀಡೆಯನ್ನು ಆಧರಿಸಿ ಆಜಾದಿ ಕಾ ಅಮೃತ್ ಮಹೋತ್ಸವ್, ಸ್ವಾತಂತ್ರ್ಯ, ಪೌಷ್ಟಿಕಾಂಶ ಕುರಿತು ರಸಪ್ರಶ್ನೆ | ಚಟುವಟಿಕೆ ವಿಧಾನ | ದೈಹಿಕ ಶಿಕ್ಷಕರು ಮತ್ತು ವಿಜ್ಞಾನ ಶಿಕ್ಷಕರು | ರಸಪ್ರಶ್ನೆ ಸ್ಪರ್ಧೆ | ಮುಖ್ಯ ಶಿಕ್ಷಕರು/ಹಿರಿಯ ಶಿಕ್ಷಕರು |
| | | ಆಜಾದಿ ಕಾ ಅಮೃತ್ ಮಹೋತ್ಸವ್ ದ ಆಧರಿಸಿ 'ನನ್ನ ಫಿಟ್ನೆಸ್ ಮಂತ್ರ' ಎಂಬುದರ ಮೇಲೆ ಪ್ರಬಂಧ/ಕವನ ರಚನೆ ಸ್ಪರ್ಧೆ | ಚಟುವಟಿಕೆ ವಿಧಾನ | ದೈಹಿಕ ಶಿಕ್ಷಕರು | ಪ್ರಬಂಧ/ಕವನ ರಚನೆ ಸ್ಪರ್ಧೆ | ಮುಖ್ಯ ಶಿಕ್ಷಕರು/ದೈಹಿಕ ಶಿಕ್ಷಕರು |
| | | ಜಡ ಜೀವನ ಶೈಲಿಯಿಂದ ಸ್ವಾತಂತ್ರ– ಈ ವಿಷಯದ ಮೇಲೆ ಭಿತ್ತಿಪತ್ರ ತಯಾರಿಕಾ ಸ್ಪರ್ಧೆ | ಚಟುವಟಿಕೆ ವಿಧಾನ | ದೈಹಿಕ ಶಿಕ್ಷಕರು | ಭಿತ್ತಿಪತ್ರ ತಯಾರಿಕಾ ಸ್ಪರ್ಧೆ | ಮುಖ್ಯ ಶಿಕ್ಷಕರು/ದೈಹಿಕ ಶಿಕ್ಷಕರು |
| 3 | 3 | ಭಾರತೀಯ ಸಾಂಪ್ರದಾಯಿಕ ಅಟಗಳು– ಆಜಾದಿ ಕಾ ಅಮೃತ್ ಮಹೋತ್ಸವ್ ದ ಅಂಗವಾಗಿ ಸಮತೋಲಿತ ಆಹಾರದ ಪ್ರಾಮುಖ್ಯತೆಯ ಕುರಿತು ಸಾಂಪ್ರದಾಯಿಕ ಆಟಗಳನ್ನು ಆಯೋಜಿಸುವುದು | ಚಟುವಟಿಕೆ ವಿಧಾನ | ದೈಹಿಕ ಶಿಕ್ಷಕರು | ಸಾಂಪ್ರದಾಯಿಕ ಆಟಗಳು | ಮುಖ್ಯ ಶಿಕ್ಷಕರು/ದೈಹಿಕ ಶಿಕ್ಷಕರು |
| 4 | 4 | ಶಾಲೆಗಳ ಸಾಮಾಜಿಕ ಜವಾಬ್ದಾರಿ – ಸಮುದಾಯವನ್ನು ಒಂದು ಅವಧಿಯ ಫಿಟ್ನೆಸ್ ಕಾರ್ಯಕ್ರಮಕ್ಕೆ ಆಹ್ವಾನಿಸುವುದು. | ಚಟುವಟಿಕೆ ವಿಧಾನ | ದೈಹಿಕ ಶಿಕ್ಷಕರು | ಚಟುವಟಿಕೆಗಳು | ಮುಖ್ಯ ಶಿಕ್ಷಕರು/ಹಿರಿಯ ಶಿಕ್ಷಕರು |

| | | | | | | |
|---|---|---|---|---|---|---|
| 5 | 5 | ಯೋಗ ಮತ್ತು ಧ್ಯಾನ– ಏಕಾಗ್ರತೆಯನ್ನು ಹೆಚ್ಚಿಸುವ/ಸಮಸ್ಯೆ ಪರಿಹರಿಸುವ ಸಾಮರ್ಥ್ಯವನ್ನು ಸುಧಾರಿಸುವ ಮೆದುಳಿನ ಆಟಗಳು | ಚಟುವಟಿಕೆ ವಿಧಾನ | ದೈಹಿಕ ಶಿಕ್ಷಕರು | ಮೆದುಳಿನ ಆಟಗಳು | ಮುಖ್ಯ ಶಿಕ್ಷಕರು/ಹಿರಿಯ ಶಿಕ್ಷಕರು |
| | | ಸ್ವಾತಂತ್ರ ಎಂದರೇನು? ಫಿಟ್ನೆಸ್ ನ ಪ್ರಮುಖ್ಯತೆ ಏನು? ಎಂಬ ವಿಷಯಗಳ ಬಗ್ಗೆ ಗೀಚುಬರಹ. (scribbling) | ಚಟುವಟಿಕೆ ವಿಧಾನ | ದೈಹಿಕ ಶಿಕ್ಷಕರು | ಗೀಚುಬರಹ. | ಮುಖ್ಯ ಶಿಕ್ಷಕರು/ಹಿರಿಯ ಶಿಕ್ಷಕರು |
| | | ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದು | ಉಪನ್ಯಾಸ ಮತ್ತು ಚಟುವಟಿಕೆ ವಿಧಾನ | ದೈಹಿಕ ಶಿಕ್ಷಕರು | ವೀಕ್ಷಣೆ | ಮುಖ್ಯ ಶಿಕ್ಷಕರು/ಹಿರಿಯ ಶಿಕ್ಷಕರು |
| 6 | 6 | ಆಜಾದಿ ಕಾ ಅಮೃತ್ ಮಹೋತ್ಸವ್ ದ ಅಂಗವಾಗಿ ಫಿಟ್ನೆಸ್ ಮತ್ತು ಆರೋಗ್ಯಕರ ಜೀವನವನ್ನು ನಡೆಸಲು ಸ್ವಯಂ ಪ್ರತಿಪಾದನೆಯೊಂದಿಗೆ ಪ್ರತಿಜ್ಞೆ ಕೈಗೊಂಡು ಶಾಲಾ ಸಪ್ತಾಹ ಚಟುವಟಿಗಳನ್ನು ಮುಕ್ತಾಯಗೊಳಿಸುವುದು | ಪ್ರತಿಜ್ಞೆ ವಿಧಿ | ದೈಹಿಕ ಶಿಕ್ಷಕರು | ವೀಕ್ಷಣೆ | ಮುಖ್ಯ ಶಿಕ್ಷಕರು/ಹಿರಿಯ ಶಿಕ್ಷಕರು |

# ಅನುಬಂಧ-2

## ಫಿಟ್ ಇಂಡಿಯಾ ಸ್ಕೂಲ್ ಸಪ್ತಾಹ ಕಾರ್ಯಕ್ರಮದ ಜಿಲ್ಲಾವಾರು ಮಾಹಿತಿ ಕ್ರೋಢೀಕರಣ ತಃಖ್ತೆ

| ಕ್ರಸಂ | ವಿವರಗಳು | ಪ್ರಾಥಮಿಕ ಶಾಲೆಗಳು | | | ಪ್ರೌಢಶಾಲೆಗಳು | | | ಒಟ್ಟು ಶಾಲೆಗಳು | | |
|---|---|---|---|---|---|---|---|---|---|---|
| | | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಸರ್ಕಾರಿ | ಅನುದಾನಿತ | ಅನುದಾನ ರಹಿತ | ಸರ್ಕಾರಿ | ಅನುದಾನಿತ | ಅನುದಾನ ರಹಿತ |
| 1 | ಜಿಲ್ಲೆಯಲ್ಲಿರುವ ಒಟ್ಟು ಶಾಲೆಗಳ ಸಂಖ್ಯೆ | | | | | | | | | |
| 2 | ಫಿಟ್ ಇಂಡಿಯಾ ಶಾಲಾ ಸಪ್ತಾಹ ಕಾರ್ಯಕ್ರಮಕ್ಕೆ ನೋಂದಣಿಯಾದ ಶಾಲೆಗಳ ಸಂಖ್ಯೆ | | | | | | | | | |
| 3 | ಫಿಟ್ ಇಂಡಿಯಾ ಶಾಲಾ ಸಪ್ತಾಹ ಕಾರ್ಯಕ್ರಮವನ್ನು ಆಯೋಜಿಸಿದ ಶಾಲೆಗಳ ಸಂಖ್ಯೆ | | | | | | | | | |
| 4 | ಫಿಟ್ ಇಂಡಿಯಾ ಕಾರ್ಯಕ್ರಮದ ಫೋಟೋಗಳನ್ನು ಭಾರತ ಸರ್ಕಾರದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿರುವ ಶಾಲೆಗಳ ಸಂಖ್ಯೆ | | | | | | | | | |

ಉಪನಿರ್ದೇಶಕರು (ಆಡಳಿತ)

ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು


fitindia.gov.in/fit-india-school-week
Fit India School Week 2021
Skip to Main Content
A+
A
A-
Print
Language
Login
Register
FIT INDIA
युवा कार्यक्रम और खेल मंत्रालय
MINISTRY OF
YOUTH AFFAIRS AND SPORTS
SAI
Events
Fit India Quiz
Fit India Certification
Dialogue Session
Fit India Ambassadors
Fit India Champions
Fit India Icons
Contact Us
Fit India School Week 2021
Azadi Ka Amrit Mahotsav
#AmritMahotsav
FIT INDIA SCHOOL WEEK
IS BACK
Starting 14th November
14th November - 12th December
FIT INDIA
#FitIndiaSchoolWe
Register as an Organiser
How To Register
FIT INDIA SCHOOL WEEK 2021
13:50
04-11-21

Annexure - I

# FIT INDIA

# How to Register

For Schools to register for Fit India School Week-2021

Step-1: On your desktop/Laptop/Mobile please open the internet browser (chrome/Google) and in the address bar please type **https://fitindia.gov.in/**


**Step-2:** Please click on **Fit India School Week** Orange Tab at the left top of the website for registration of **Fit India School Week.**




**Step-3:** Once you click on the Tab, the below page will appear, click on register as an organiser.




**Step-4:** If you are already a registered user with Fit India you can click on **login** or if you are new user please register yourself as **School**.





**Step-5:** Once you have logged in, please submit the details of the School Week event organised by your school and click on Submit button.

Photos and Video link are optional (not mandatory) for downloading of the certificate.



**Step-6:** You will automatically be directed on the Event page for downloading of the certificate with a **pink tab**.




**NOTE:** Certificate can only be downloaded by the end of the event date selected by the user.